# ನಾನು ಗೌರಿ ಸಮಾವೇಶದಲ್ಲಿ ಮುಗಿಲು ಮುಟ್ಟಿದ ಆಕ್ರೋಶ

## ಹೋರಾಟಗಾರರು, ಸ್ವಾಮೀಜಿಗಳಿಂದ ತೀವ್ರ ಖಂಡನೆ

ಬೆಂಗಳೂರು,ಸೆ.೧೨– ಪತ್ರಕರ್ತೆ ಹಾಗೂ ಚಿಂತಕಿ ಗೌರಿ ಲಂಕೇಶ್ ಹತ್ಯೆ ಖಂಡಿಸಿ ದೇಶ, ವಿದೇಶಗಳಿಂದ ಆಗಮಿಸಿದ್ದ ಸಹಸ್ರಾರು ಮಂದಿ ಸಾಮಾಜಿಕ ಕಾರ್ಯಕರ್ತರು, ಹೋರಾಟಗಾರರು ಸಾಗರೋಪಾದಿಯಲ್ಲಿ ಸಮಾವೇಶಗೊಂಡು ಭಾರೀ ಪ್ರತಿಭಟನೆ ನಡೆಸಿದರು. ಬಿಜೆಪಿ, ಸಂಘ ಪರಿವಾರದ ವಿರುದ್ಧ ಬಹಿರಂಗವಾಗಿ ಆಕ್ರೋಶ ವ್ಯಕ್ತಪಡಿಸಿದರು.

ರೈಲು ನಿಲ್ದಾಣದ ಬಳಿ ಜಾಥಾಕ್ಕೆ ಚಾಲನೆ ನೀಡಿದ ಮುರುಘಾಮಠದ ಮುರುಘರಾಜೇಂದ್ರ ಶರಣರು, ಒಬ್ಬ ಗೌರಿಯನ್ನು ಹತ್ಯೆ ಮಾಡುವುದರಿಂದ ಸಮಾನತೆಸಾರುವ ವಿಚಾರಗಳನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಒಬ್ಬ ಗೌರಿ ಹತ್ಯೆಯಿಂದ ಸಾವಿರಾರು ಗೌರಿಗಳು ಹುಟ್ಟಿಕೊಳ್ಳುತ್ತಾರೆ. ಗೌರಿ ಹತ್ಯೆ ಪ್ರಜಾಪ್ರಭುತ್ವದ ಕಗ್ಗೊಲೆ ಎಂದರು.

ಸಮಾವೇಶದಲ್ಲಿ ಗೌರಿ ಲಂಕೇಶ್ ಹತ್ಯೆ ಖಂಡಿಸಿ ಸಾಹಿತಿಗಳು, ಕಲಾವಿದರು, ವಿವಿಧ ಪ್ರಗತಿಪರ ಸಂಘಟನೆಗಳ ಹೋರಾಟಗಾರರು, ಸ್ವಾಮೀಜಿಗಳು ಕಟು ಶಬ್ದಗಳಿಂದ ಖಂಡಿಸಿದರು. ಸಮಾವೇಶದಲ್ಲಿ ಘೋಷಣೆಗಳು ಮುಗಿಲು ಮುಟ್ಟಿದವು. ಜನಪರವಾದ ವಿಚಾರಗಳನ್ನು ಎದುರಿಸಲಾಗದ ಮಂದಿ ಬಂದೂಕಿನ ನಳಿಗೆಗಳಿಂದ ಹೆದರಿಸಬಹುದು ಎಂದು ನಂಬಿದ್ದರೆ ಅದು ಹೇಡಿತನ ಮತ್ತು ಸೋಲಿನ ಪರಮಾವಧಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಅವರು 'ಗೌರಿ ಲಂಕೇಶ್' ಪತ್ರಿಕೆಯ 'ದನಿ–ಅಡಗುವುದಿಲ್ಲ' ವಿಶೇಷಾಂಕವನ್ನು ಬಿಡುಗಡೆ ಮಾಡಿ ಸಮಾವೇಶಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ನನಗೆ ೯೯ ವರ್ಷ ವಯಸ್ಸು, ಈ ವಯಸ್ಸಿನಲ್ಲೂ ನನಗೆ ಹೋರಾಡೋ ಕಿಚ್ಚಿದೆ. ಆದರೆ, ನಿಮ್ಮಲ್ಲಿ ಯಾಕೆ ಇರುವುದಿಲ್ಲ. ದ್ವೇಷವನ್ನು ಪ್ರಚೋದಿಸುವ ಧರ್ಮವನ್ನ ನಾವು ಒಪ್ಪುವುದಿಲ್ಲ ಎಂದು ಹೇಳಿದರು.

ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಮಾತನಾಡಿ, ಇದು ಬಹುಸಂಖ್ಯಾತರ ಫ್ಯಾಸಿಸ್ಟ್ ದೇಶವಲ್ಲ. ಬಸವ, ಬುದ್ಧರ ದೇಶ. ಗೌರಿ ಸಾವು ವ್ಯರ್ಥವಾಗಬಾರದು ಎಂದರು.

ಎಡರಂಗದ ಧುರೀಣ ಸೀತಾರಾಂ ಯಚೂರಿ ಮಾತನಾಡಿ, ಗೋ ರಕ್ಷಕ ಸಮಿತಿ, ನೈತಿಕ ಪೊಲೀಸ್‌ಗಿರಿ ನಡೆಸುವವರು ದೇಶದಲ್ಲಿ ಯಾರು ಏನು ತಿನ್ನಬೇಕು, ಏನು ಮಾತಾಡಬೇಕು ಎಂಬುದನ್ನು ನಿರ್ಧರಿಸಲು ಹೊರಟಿದ್ದಾರೆ. ಸ್ವಾತಂತ್ರ್ಯ ಪಡೆದ ಮರುಗಳಿಗೆಯಲ್ಲಿ ಗಾಂಧಿಯನ್ನು ಕೊಂದವರು ಇಂದು ವಿಜೃಂಭಿಸುತ್ತಿದ್ದಾರೆ. ಸರದಾರ್ ವಲ್ಲಭಾಯ್ ಪಟೇಲ್ ಕೂಡ ಆರ್‌ಎಸ್‌ಎಸ್ ನಿಷೇಧಿಸಬೇಕೆಂದು ಹೇಳಿದ್ದರು. ಇದು ಸಿಡಿದೇಳುವ ಸಮಯ ಎಂದು ಕರೆ ನೀಡಿದರು.

ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಶರಣರು ಮಾತನಾಡಿ, ಸದಾ ತೂಗುಗತ್ತಿ ತೂಗುತ್ತಿದ್ದರೂ ಅದನ್ನು ಲೆಕ್ಕಿಸದೆ ಹಲವರು ಹೋರಾಡುತ್ತಿದ್ದಾರೆ. ಅಂಬೇಡ್ಕರ್ ಕೂಡ ಅದೇ ರೀತಿಯ ಹೋರಾಟಗಾರರು. ವಿಚಾರಕ್ಕೆ ವಿಚಾರ ವಿನಿಮಯವಾಗಬೇಕು, ಹತ್ಯೆತಲ್ಲ. ಪೆನ್ ಟು ಪೆನ್ ಸಂಸ್ಕೃತಿ ದೂರವಾಗಿ ಪೆನ್ ಟು ಗನ್ ಸಂಸ್ಕೃತಿ ಬೆಳೆಯುತ್ತಿದೆ. ಇದು ಅಪಾಯಕಾರಿ ಬೆಳವಣಿಗೆ ಎಂದು ಹೇಳಿದರು.

ಕನ್ನಡದಲ್ಲಿ 'ಬೇಕೇ ಬೇಕು ನ್ಯಾಯ ಬೇಕು' ಎಂದು ಘೋಷಣೆ ಕೂಗಿದ ಸಾಮಾಜಿಕ ಹೋರಾಟಗಾರ್ತಿ ಮೇಧಾ ಪಾಟ್ಕರ್. ಮಾತನಾಡಿ, ಹಿಂಸೆಗಳನ್ನು ಪ್ರತಿರೋಧಿಸಿದವರ ಹತ್ಯೆಯಾಗಿದೆ. ಗೌರಿ ಬಲಿದಾನಕ್ಕೆ ನ್ಯಾಯ ಸಿಗಬೇಕು. ದಾಬೋಲ್ಕರ್‌ರಿಂದ ಗೌರಿ ತನಕ ನಡೆದ ಹತ್ಯೆಗಳಲ್ಲಿ ಗೋವಾದ ಸನಾತನ ಸಂಸ್ಥೆಯಂತ ಮೂಲಭೂತವಾದಿ ಗಳ ಕೈವಾಡವಿದೆ. ಗೌರಿ ಹತ್ಯೆ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಯಾಕೆ ಮೌನವಾಗಿದ್ದಾರೆ ಎಂಬುದು ಬಹಿರಂಗ ವಾಗಬೇಕು ಎಂದು ಆಗ್ರಹಿಸಿದರು.

ನಿಡುಮಾಮಿಡಿ ಚೆನ್ನಮಲ್ಲ ವೀರಭದ್ರ ಸ್ವಾಮೀಜಿ, ಕೋಮುವಾದಿಗಳ ಕೈಲಿ ಅಧಿಕಾರ ಕೊಟ್ಟು ಕೈ ಕಟ್ಟಿಸಿಕೊಂಡ ಹಾಗೆ ಆಗಿದೆ. ಕಲಬುರ್ಗಿ ಹತ್ಯೆ ಬಾಡಿಗೆ ಹಂತಕರು ಎಲ್ಲಿದ್ದಾರೋ ಗೊತ್ತಿಲ್ಲ; ಆದರೆ, ಗೌರಿ ಹತ್ಯೆಯ ಪ್ರಾಯೋಜಕರು ರಾಜ್ಯದಲ್ಲಿಯೇ ಇದ್ದಾರೆ. ಕಲಬುರ್ಗಿಯವರದ್ದು ಧಾರ್ಮಿಕ ಹತ್ಯೆ. ಗೌರಿಯದ್ದು ರಾಜಕೀಯ ಹತ್ಯೆ ಎಂದು ಹೇಳಿದರು.

ನಿಜಗುಣಾನಂದ ಸ್ವಾಮೀಜಿ ಮಾತನಾಡಿ, ದ್ರೌಪದಿಯ ಸೀರೆ ಎಳೆದವರು ನೀವು, ಸೀತೆಗೆ ಅಗ್ನಿ ಪರೀಕ್ಷೆ ನೀಡಿದವರು ನೀವು, ಈ ದೇಶದಲ್ಲಿ ಗುಡಿಯಲ್ಲಿ ದೇವತೆಗೆ ಸೀರೆ ಉಡಿಸಿ ಪೂಜೆ ಮಾಡುವವರು ನೀವು. ಬೀದಿಯಲ್ಲಿ ಮಹಿಳೆಯರನ್ನು ಕೊಂದವರೂ ನೀವೇ; ನೀವೇ ಹಿಂದಿನಿಂದ ಕೊಂದವರು, ನಾವು ಗುಂಡಿಗೆ ಎದೆ ಕೊಟ್ಟು ನಿಂತವರು ಎಂದು ಗುಡುಗಿದರು.

ನಟ ಚೇತನ್ ಮಾತನಾಡಿ, ಗೌರಿ ಲಂಕೇಶ್ ಹತ್ಯೆ ಒಂದು ರೀತಿಯ ಭಯೋತ್ಪಾದನೆಯಾಗಿದೆ. ಚಿಂತಕರಿಗೆ, ಪ್ರಗತಿಪರರಿಗೆ ರಕ್ಷಣೆ ಕೊಡುವುದರಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಎಲ್ಲ ಪಕ್ಷಗಳೂ ಅಷ್ಟೇ, ಕೇವಲ ಬಂಡವಾಳಶಾಹಿಗಳ ಪರವಾಗಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಹಾರಾಷ್ಟ್ರದಲ್ಲಿ ಹತರಾದ ವಿಚಾರವಾದಿ ಗೋವಿಂದ ಪನ್ಸಾರೆ ಅವರ ಪುತ್ರಿ ಮೇಘನಾ ಪನ್ಸಾರೆ, ಗುಜರಾತ್‌ನ ದಲಿತ ಹೋರಾಟಗಾರ ಜಿಗ್ನೇಶ್ ಮೇವಾನಿ, ಕೆ.ಎಸ್. ವಿಮಲಾ ಮತ್ತಿತರರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಪ್ರತಿಭಟನಾ ಸಮಾವೇಶಕ್ಕೆ ಕೇಂದ್ರ ವಲಯ ಡಿಸಿಪಿ ಚಂದ್ರಗುಪ್ತ ಉತ್ತರ ವಲಯ ಡಿಸಿಪಿ ಚೇತನ್‌ಸಿಂಗ್ ಹಾಗೂ ದಕ್ಷಿಣ ವಲಯ ಡಿಸಿಪಿ ಶರಣಪ್ಪ ಅವರ ನೇತೃತ್ವದಲ್ಲಿ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿತ್ತು. ೧೦ ಕೆಎಸ್‌ಆರ್‌ಪಿ ತುಕಡಿ, ೮ ಎಸಿಪಿ, ೧೨ಕ್ಕೂ ಹೆಚ್ಚು ಇನ್‌ಸ್ಪೆಕ್ಟರ್‌ಗಳನ್ನು ಭದ್ರತೆಗಾಗಿ ನಿಯೋಜಿಸಲಾಗಿತ್ತು. ಸಮಾವೇಶ ನಡೆದ ಮೈದಾನ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಸಂಚಾರ ದಟ್ಟಣೆ ಉಂಟಾಗದಂತೆ ಡಿಸಿಪಿ ಶಿವಕುಮಾರ್ ನೇತೃತ್ವದಲ್ಲಿ ಸಂಚಾರಿ ಪೊಲೀಸರ ನಿಯೋಜನೆ ಮಾಡಲಾಗಿತ್ತು. ರೈಲು ನಿಲ್ದಾಣದಿಂದ ಸೆಂಟ್ರಲ್ ಕಾಲೇಜು ಮೈದಾನದವರೆಗೆ ಹೆಚ್ಚಿನ ಸಂಚಾರ ಪೊಲೀಸರನ್ನು ನಿಯೋಜಿಸಲಾಗಿತ್ತು.




ಗೌರಿ ಲಂಕೇಶ್ ಅವರ ಹತ್ಯೆ ಖಂಡಿಸಿ ನಾನಾ ಪ್ರಗತಿಪರ ಸಂಘಟನೆಗಳು ಆಯೋಜಿಸಿದ್ದ ಪ್ರತಿರೋಧ ಸಮಾವೇಶದಲ್ಲಿ ಕವಿತಾ ಲಂಕೇಶ್, ನಿಡುಮಾಮಿಡಿ ಚೆನ್ನಮಲ್ಲ ವೀರಭದ್ರ ಸ್ವಾಮೀಜಿ, ಮುರುಘರಾಜೇಂದ್ರ ಶರಣರು, ನಿಜಗುಣಾನಂದ ಸ್ವಾಮೀಜಿ, ಎಚ್.ಎಸ್.ದೊರೆಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

### ಬಹುತ್ವ, ಬಹುತ್ವ ಇದೇ ನಮ್ಮ ಧರ್ಮ

ಹಿಂದಿನ ಆಳ್ವಿಕೆಯ ಸರ್ಕಾರಗಳು ಕನಸು ಕಾಣುತ್ತಿದ್ದವು. ಜಡತ್ವದಿಂದ ಕನಸು ನನಸಾಗಿಸುವತ್ತ ಸಾಗುತ್ತಿದ್ದವು. ಆದರೆ, ಇವತ್ತಿನ ಆಳ್ವಿಕೆ ಭೂತವನ್ನು ವರ್ತಮಾನಕ್ಕೆ ದೂಡುತ್ತಿವೆ. ಇವತ್ತು ಎಲ್ಲವೂ ತಿರುಗಾ ಮುರಗಾ ಆಗಿದೆ. ಜಡ ಸಮಾಜದಲ್ಲಿ ಸರ್ಕಾರವೇ ಹಿಂದೆ ಹೋಗುತ್ತಿದೆ. ಲಕ್ಷಾಂತರ ಕೋಟಿ ರೂ. ಬಂಡವಾಳಿಗರ ಕೈ ಸೇರುತ್ತಿದೆ. ಬಹುತ್ವಕ್ಕೆ ಹೊಡೆತ ಬೀಳುತ್ತಿದೆ. ಅದೇ ಕಾರಣಕ್ಕೆ ಗೌರಿ ಹತ್ಯೆಯಾಗಿದೆ. ಬಹುತ್ವ, ಬಹುತ್ವ ಇದೇ ನಮ್ಮ ಧರ್ಮ. ಸಹನೆ, ಪ್ರೀತಿ ಇದ್ದಾಗ ಸಮಾನತೆ ಕಡೆ ಹೆಜ್ಜೆ ಹಾಕಬಹುದು.

**-ದೇವನೂರ ಮಹಾದೇವ**

### 'ನಾನು ಗೌರಿ' ಸಮಾವೇಶದಲ್ಲಿ ರಾಜಘಟ್ಟ

ಬೆಂಗಳೂರು: ಗೌರಿ ಲಂಕೇಶ್ ಅವರ ಹತ್ಯೆ ಖಂಡಿಸಿ ನಾನಾ ಪ್ರಗತಿಪರ ಸಂಘಟನೆಗಳು ಆಯೋಜಿಸಿದ್ದ ಪ್ರತಿರೋಧ ಸಮಾವೇಶದಲ್ಲಿ ಗೌರಿ ಅವರ ಪತಿಯಾಗಿದ್ದ ಚಿದಾನಂದ ರಾಜಘಟ್ಟ ಹಾಗೂ ರಾಜಘಟ್ಟ ಅವರ ಪತ್ನಿ ಮತ್ತು ಗೌರಿಯ ಗೆಳತಿಯಾಗಿರುವ ಮೇರಿ ಬ್ರೀಡಿಂಗ್ ಭಾಗವಹಿಸಿದ್ದರು.

ಸಮಾವೇಶದಲ್ಲಿ ಭಾಗವಹಿಸಲು ಅಮೆರಿಕದಿಂದ ಬಂದಿರುವ ರಾಜಘಟ್ಟ ಹಾಗೂ ಮೇರಿ ಬ್ರೀಡಿಂಗ್ ಸಾರ್ವಜನಿಕರ ಜತೆಯಲ್ಲಿ ಕುಳಿತಿದ್ದರು. ಗೌರಿ ಮತ್ತು ರಾಜಘಟ್ಟ ಅವರ ಮದುವೆ ವಿಚ್ಛೇದನದಲ್ಲಿ ಕೊನೆಗೊಂಡಿದ್ದರೂ ಇಬ್ಬರೂ ಪರಸ್ಪರ ಉತ್ತಮ ಸ್ನೇಹ, ಬಾಂಧವ್ಯ ಹೊಂದಿದ್ದರು. ಪರಸ್ಪರರ ಕುಟುಂಬಗಳ ಇತರ ಸದಸ್ಯರೊಂದಿಗೂ ಉತ್ತಮ ಬಾಂಧವ್ಯ ಹೊಂದಿದ್ದರು.

## ಕೊಡಗಿನಲ್ಲಿ ಕಂಪಿಸಿದ ಭೂಮಿ; ಜನರಲ್ಲಿ ಭೀತಿ

ಮಡಿಕೇರಿ,ಸೆ.೧೨– ಕೊಡಗು ಜಿಲ್ಲೆಯ ಕೆಲವೆಡೆ ಮಂಗಳವಾರ ಬೆಳಿಗ್ಗೆ ಭೂಮಿ ಕಂಪಿಸಿರುವ ಬಗ್ಗೆ ವರದಿಯಾಗಿದೆ. ಭೂಮಿ ಕಂಪಿಸಿದ್ದರಿಂದ ಜನರು ಭೀತಿಗೊಳಗಾಗಿದ್ದಾರೆ. ಯಾವುದೇ ಹಾನಿ ಸಂಭವಿಸಿಲ್ಲ.

ಮಂಗಳವಾರ ಬೆಳಿಗ್ಗೆ ೭.೪೫ರ ಹೊತ್ತಿಗೆ ಮಡಿಕೇರಿ ತಾಲ್ಲೂಕಿನ ನಾಪೋಕ್ಲು ಸಮೀಪದ ಬಲ್ಲಮಾವಟಿ ಎಂಬಲ್ಲಿ ಲಘುವಾಗಿ ಭೂಮಿ ಕಂಪಿಸಿರುವುದು ಸ್ಥಳೀಯರ ಅನುಭವಕ್ಕೆ ಬಂದಿದೆ. ೬ ನಿಮಿಷಗಳ ನಂತರ ಮತ್ತೊಮ್ಮೆ ಭೂಮಿ ಕಂಪಿಸಿತು ಎಂದೂ ಜನರು ಹೇಳಿದ್ದಾರೆ. ಈ ವ್ಯಾಪ್ತಿಯ ೫ ಕಿ.ಮೀ ವ್ಯಾಪ್ತಿಯಲ್ಲಿ ಭೂಮಿ ಕಂಪಿಸಿರುವ ಬಗ್ಗೆ ವರದಿಯಾಗಿದೆ. ಭೂಮಿಯ ಕಂಪನದಿಂದ ಮನೆಯೊಳಗಿದ್ದವರು ಹೊರಗೋಡಿ ಬಂದಿದ್ದಾರೆ.

## ಕೇಂದ್ರ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ಶೇ.೧ ಹೆಚ್ಚಳ

ಹೊಸದಿಲ್ಲಿ,ಸೆ.೧೨– ಕೇಂದ್ರ ಸರ್ಕಾರದ ನೌಕರರಿಗೆ ದಸರಾ ಕೊಡುಗೆ ದೊರೆತಿದೆ. ೧.೧೦ ಕೋಟಿ ನೌಕರರಿಗೆ ತುಟ್ಟಿಭತ್ಯೆ ಹೆಚ್ಚಳ ಮಾಡಲಾಗಿದೆ. ಶೇ.೪ರಿಂದ ಶೇ.೫ಕ್ಕೆ ತುಟ್ಟಿ ಭತ್ಯೆ ಹೆಚ್ಚಳ ಮಾಡಿ ಕೇಂದ್ರ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.

ಜು.೧ರಿಂದಲೇ ಪೂರ್ವಾನ್ವಯವಾಗುವಂತೆ ಈ ಆದೇಶ ಜಾರಿಗೆ ಬರಲಿದೆ. ಮಂಗಳವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆ ಈ ನಿರ್ಣಯ ಕೈಗೊಂಡಿದೆ.೪೯.೨೬ ಲಕ್ಷ ನೌಕರರು, ೬೧.೧೭ ಲಕ್ಷ ಪಿಂಚಣಿದಾರರಿಗೆ ಇದರ ಪ್ರಯೋಜನ ದೊರೆಯಲಿದೆ. ತುಟ್ಟಿ ಭತ್ಯೆ ಹೆಚ್ಚಳದಿಂದ ಬೊಕ್ಕಸಕ್ಕೆ ವಾರ್ಷಿಕ ೩ ಸಾವಿರ ಕೋಟಿ ರೂ. ಹೊರೆಯಾಗಲಿದೆ.

## ಎಐಎಡಿಎಂಕೆ: ಶಶಿಕಲಾ ಉಚ್ಚಾಟನೆ

ಚೆನ್ನೈ,ಸೆ.೧೨– ದಿನಕ್ಕೊಂದು ತಿರುವು ಪಡೆಯುತ್ತಿರುವ ತಮಿಳುನಾಡು ರಾಜಕಾರಣದಲ್ಲಿ ವಿವಾದದ ಕೇಂದ್ರ ಬಿಂದುವಾಗಿರುವ ಹಾಗೂ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿರುವ ಎಐಎಡಿಎಂಕೆ ಹಂಗಾಮಿ ಪ್ರಧಾನ ಕಾರ್ಯದರ್ಶಿ ಶಶಿಕಲಾ ನಟರಾಜನ್ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ.

ಸರ್ಕಾರದ ವಿರುದ್ಧ ಬಂಡಾಯದ ಕಹಳೆ ಮೊಳಗಿಸಿದ ಶಶಿಕಲಾ ಅವರ ಸಹೋದರ ಸಂಬಂಧಿ ಹಾಗೂ ಪಕ್ಷದ ಉಪ ಪ್ರಧಾನಕಾರ್ಯದರ್ಶಿ ಟಿ.ಟಿ.ವಿ ದಿನಕರನ್ ಅವರನ್ನು ಪಕ್ಷದಿಂದ ವಜಾಗೊಳಿಸಲಾಗಿದೆ.

ಚೆನ್ನೈನಲ್ಲಿ ಮಂಗಳವಾರ ಮುಖ್ಯಮಂತ್ರಿ ಎಡಪ್ಪಾಡಿ ಕೆ.ಪಳನಿಸ್ವಾಮಿ ಹಾಗೂ ಉಪ ಮುಖ್ಯಮಂತ್ರಿ ಒ.ಪನ್ನೀರ್ ಸೆಲ್ವಂ ನೇತೃತ್ವದಲ್ಲಿ ನಡೆದ ಎಐಎಡಿಎಂಕೆ ಸಾಮಾನ್ಯ ಸಭೆಯಲ್ಲಿ ಶಶಿಕಲಾ ಮತ್ತು ದಿನಕರನ್ ಅವರನ್ನು ಉಚ್ಚಾಟಿಸುವ ಒಮ್ಮತದ ನಿರ್ಣಯ ಕೈಗೊಳ್ಳಲಾಗಿದೆ.

ಈಗಾಗಲೇ ಪಳನಿಸ್ವಾಮಿ ವಿರುದ್ಧ ದಿನಕರನ್ ಬಣದ ೨೦ಕ್ಕೂ ಹೆಚ್ಚು ಶಾಸಕರು ತಿರುಗಿ ಬಿದ್ದು, ಸರ್ಕಾರಕ್ಕೆ ನೀಡಿರುವ ಬೆಂಬಲ ಹಿಂದಕ್ಕೆ ಪಡೆದಿದ್ದಾರೆ. ಶಶಿಕಲಾರನ್ನು ವಜಾಗೊಳಿಸಿದ ನಂತರ ಕಂಡುಬರುವ ಬೆಳವಣಿಗೆ ಆಧರಿಸಿ ವಿಲೀನಗೊಂಡ ಎರಡೂ ಬಣಗಳು ಮುಂದಿನ ಹೆಜ್ಜೆ ಇಡಲಿವೆ.

## ನ.೨೪ರಿಂದ ೮೩ನೇ ಸಾಹಿತ್ಯ ಸಮ್ಮೇಳನ: ಮನು ಬಳಿಗಾರ್

ಮೈಸೂರು,ಸೆ.೧೨– ನಗರದಲ್ಲಿ ನ.೨೪ ರಿಂದ ೨೬ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನಿಂದ ೮೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಮನು ಬಳಿಗಾರ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಂಬಂಧವಾಗಿ ಮೈಸೂರಿನ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ ಮಹದೇವಪ್ಪ ಅವರೊಂದಿಗೆ ಚರ್ಚಿಸಿ ಮುಂದಿನ ನವೆಂಬರ್ ತಿಂಗಳಿನ ೨೪ರಿಂದ ೨೬ರವರೆಗೆ ಸಮ್ಮೇಳನ ನಡೆಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.



ಡಿಸೆಂಬರ್ ತಿಂಗಳಿನಲ್ಲಿ ವಿಶ್ವ ಕನ್ನಡ ಸಮ್ಮೇಳನ ಜರುಗುವುದರಿಂದ ಅದಕ್ಕೂ ಮುನ್ನವೇ ಸಾಹಿತ್ಯ ಸಮ್ಮೇಳನ ನಡೆಸಲಾಗುವುದು ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಬಹುತೇಕ ಸದಸ್ಯರು ನವೆಂಬರ್ ಮೂರನೇ ವಾರದಲ್ಲಿ ಸಮ್ಮೇಳನ ಆಯೋಜಿಸಲು ಸಹಮತ ವ್ಯಕ್ತಪಡಿಸಿದ ನಂತರ ದಿನಾಂಕ ನಿಗದಿಪಡಿಸಲಾಗಿದೆ. ೨೦೧೮ ರಲ್ಲಿ ವಿಧಾನ ಸಭಾ ಚುನಾವಣೆಯೂ ಇರುವುದರಿಂದ ಸಾಹಿತ್ಯ ಸಮ್ಮೇಳನವನ್ನು ಜನವರಿಯವರೆಗೆ ಎಳೆಯುವುದು ಬೇಡ ಎಂದು ಸಾಹಿತ್ಯ ಪರಿಷತ್ತು ತೀರ್ಮಾನಿಸಿದೆ ಎಂದು ಹೇಳಿದರು.

ಈ ಬಾರಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನ ಯಾರು ವಹಿಸಲಿದ್ದಾರೆ ಎನ್ನುವ ಬಗ್ಗೆ ತೀರ್ಮಾನ ಕೈಗೊಂಡಿಲ್ಲ. ಈ ಸಂಬಂಧವಾಗಿ ಅನೇಕರ ಅಭಿಪ್ರಾಯ ಪಡೆದು ಚರ್ಚಿಸಿ ನಂತರ ತೀರ್ಮಾನಿಸಲಾಗುವುದು. ಈ ಬಾರಿ ಪ್ರತ್ಯೇಕ ನಾಡಧ್ವಜ, ಕೇಂದ್ರದ ಉದ್ಯೋಗದಲ್ಲಿ ಕನ್ನಡಿಗರಿಗೆ ಮೀಸಲಾತಿ ಅದರಲ್ಲೂ ಮುಖ್ಯವಾಗಿ ಬ್ಯಾಂಕಿಂಗ್ ಉದ್ಯೋಗ ಕ್ಷೇತ್ರದಲ್ಲಿ ಕನ್ನಡಿಗರಿಗೆ ಮೀಸಲಾತಿ ಹಾಗೂ ಮಾತೃ ಭಾಷಾ ಶಿಕ್ಷಣ ಈ ಕುರಿತು ಸಮ್ಮೇಳನದಲ್ಲಿ ಚರ್ಚೆಯಾಗುವ ಸಂಭವವಿದೆ.



ಚಿತ್ರಗಳು: ಗವಿಮಠ ರವಿ

## ಯುವ ಸಂಭ್ರಮದಲ್ಲಿ ಮೇಳೈಸಿದ ಸಾಂಸ್ಕೃತಿಕ ಸೊಬಗು

### ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ದಸರಾ ಯುವ ಸಂಭ್ರಮಕ್ಕೆ ಚಾಲನೆ



ಮೈಸೂರಿನ ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಯುವ ಸಂಭ್ರಮಕ್ಕೆ ಚಿತ್ರನಟಿ ಕಾರುಣ್ಯ ರಾಮ್ ಚಾಲನೆ ನೀಡಿದರು. ಮಹಾಪೌರ ಎಂ.ಜೆ.ರವಿಕುಮಾರ್, ಜಿಪಂ ಅಧ್ಯಕ್ಷೆ ನಯಿಮಾ ಸುಲ್ತಾನ್, ಉಪ ಮಹಾಪೌರರಾದ ರತ್ನ ಲಕ್ಷ್ಮಣ್, ಮೈಲ್ಯಾಕ್ ಅಧ್ಯಕ್ಷ ಎಚ್.ಎ.ವೆಂಕಟೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷೆ ಮಲ್ಲಿಗೆ ವೀರೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರವಿ ಡಿ.ಚೆನ್ನಣ್ಣನವರ್, ನಗರ ಪಾಲಿಕೆ ಆಯುಕ್ತ ಜಿ.ಜಗದೀಶ್‌ಸಮಿತಿ ಕಾರ್ಯದರ್ಶಿ ಜಿ.ಎಸ್.ಸೋಮಶೇಖರ್, ಜಿಪಂ ಸದಸ್ಯ ರಾಕೇಶ್ ಪಾಪಣ್ಣ ಚಿತ್ರದಲ್ಲಿದ್ದಾರೆ.





ಮೈಸೂರು,ಸೆ.೧೨– ನಾಡಹಬ್ಬ ದಸರೆಗೆ ಯುವ ಸಂಭ್ರಮ ಮುನ್ನುಡಿ ಬರೆಯಿತು. ವರ್ಣರಂಜಿತ ನೃತ್ಯ ಪ್ರದರ್ಶನದಲ್ಲಿ ನಾಡಿನ ಕಲೆ, ಸಂಸ್ಕೃತಿಯ ಸೊಬಗು ಅರಳಿ ಸಾಂಸ್ಕೃತಿಕ ನಗರಿಯ ಮನಸ್ಸುಗಳನ್ನು ಸೂರೆಗೊಂಡಿತು.

ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಚಾಲನೆ ಪಡೆದುಕೊಂಡ ಯುವ ಸಂಭ್ರಮದಲ್ಲಿ ಯುವ ಪ್ರತಿಭಾನ್ವಿತ ಕಲಾವಿದರು ಪ್ರೇಕ್ಷಕರನ್ನು ರಂಜಿಸುವಲ್ಲಿ ಯಶಸ್ವಿಯಾದರು.

ಚಿತ್ರನಟಿ ಕಾರುಣ್ಯ ರಾಮ್, ಮಹಾಪೌರ ಎಂ.ಜೆ.ರವಿಕುಮಾರ್, ಜಿಪಂ ಅಧ್ಯಕ್ಷೆ ನಯೀಮಾ ಸುಲ್ತಾನ್, ಇತರ ಗಣ್ಯರು ಡೊಳ್ಳು, ನಗಾರಿ ಮತ್ತು ಕಂಸಾಳೆಗಳನ್ನು ನುಡಿಸಿ ೭ ದಿನಗಳ ಯುವ ಸಂಭ್ರಮಕ್ಕೆ ಚಾಲನೆ ನೀಡಿದರು.

ಬಳಿಕ ವೇದಿಕೆಗೆ ಬಂದ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ವಿದ್ಯಾರ್ಥಿನಿ ಯರು ನವದುರ್ಗೆಯರಿಗೆ ನಮನ ಸಲ್ಲಿಸಿ ನವರಾತ್ರಿ ಉತ್ಸವಕ್ಕೆ ಚಾಲನೆ ನೀಡಿದರು.

ಮಂಗಳೂರಿನ ಹೆಜ್ಜೆನಾದ ತಂಡದವರು ೨೦ ನಿಮಿಷಗಳ ಕಾಲ ನೃತ್ಯ ಪ್ರದರ್ಶನ ನೀಡಿ ಪ್ರೇಕ್ಷಕರನ್ನು ರಂಜಿಸಿದರು. ತಂಡದ ನಾಯಕಿ ಜ್ಞಾನ ಐತಾಳ್ ನೆರೆದಿದ್ದವರು ಎದ್ದು ಕುಣಿಯುವಂತೆ ನೃತ್ಯ ಪ್ರದರ್ಶಿಸಿದರು.

ಬನ್ನೂರು ಸಂತೇಮಾಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳ ಪ್ರದರ್ಶಿಸಿದ ಸ್ವಚ್ಛ ಭಾರತ್ ನೃತ್ಯವೂ ಮೋಹಕವಾಗಿ ಮೂಡಿ ಬಂದಿತು. ನಂತರ ಮೈಸೂರಿನ ಕರುಣಾಮಯಿ ಫೌಂಡೇಶನ್‌ನ ವಿಶೇಷಚೇತನರು ಕನ್ನಡಾಭಿಮಾನ ವ್ಯಕ್ತಪಡಿಸಿದ ನೃತ್ಯಕ್ಕೆ ಮನಸೋತ ಪ್ರೇಕ್ಷಕರು ಎದ್ದು ನಿಂತು ಗೌರವ ಸೂಚಿಸಿದರು.

ಬೆಂಗಳೂರಿನ ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಕಾಲೇಜು ತಂಡದವರು ಭರತನಾಟ್ಯ ಪ್ರದರ್ಶನ ನೀಡಿದರೆ, ಪುಟ್ಟವೀರಮ್ಮ ಶ್ರವಣದೋಷವುಳ್ಳ ಬಾಲಕಿಯರ ಕಾಲೇಜು ತಂಡದವರ ನವದುರ್ಗಿ ಅವತಾರ, ಮೈಸೂರು ವಿವಿ ಸಂಜೆ ಕಾಲೇಜು ತಂಡದ ಜಾನಪದ ಸಂಸ್ಕೃತಿ, ಮಹಾರಾಣಿ ಮಹಿಳಾ ಕಲಾ ಕಾಲೇಜು ತಂಡದ ಕನ್ನಡ ಪ್ರೇಮ, ಒಂಟಿಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜು ತಂಡದ ರೈತರೇ ರಾಷ್ಟ್ರದ ಬೆನ್ನೆಲುಬು ಎಂಬ ನೃತ್ಯ ಪ್ರದರ್ಶನ ಗಮನ ಸೆಳೆದವು.

ಮೈಸೂರು ದಸರಾ ಅದ್ಭುತ. ಯುವ ಸಂಭ್ರಮ ಉದ್ಘಾಟಿಸುತ್ತಿರುವುದು ಖುಷಿ ತಂದಿದೆ. ಸ್ವಚ್ಛ ನಗರಿ, ಉದ್ಯಾನವನಗಳ ನಗರಿ ಮೈಸೂರಿನ ಬಗ್ಗೆ ವಿಶೇಷವಾದ ಹೆಮ್ಮೆ ಇದೆ.

**-ಕಾರುಣ್ಯ ರಾಮ್**, ಚಿತ್ರನಟಿ

ಇವತ್ತು ನಾವು ಹಾಡೋ ಹಾಡು, ನೃತ್ಯದ ಹೆಜ್ಜೆಯಲ್ಲಿ ನಮ್ಮ ಪೂರ್ವಿಕರ ಬದುಕಿದೆ. ಇತಿಹಾಸವಿದೆ. ಇದನ್ನು ತಿಳಿದುಕೊಂಡರೆ ಭವಿಷ್ಯದ ಹಾದಿ ತೋರುತ್ತದೆ.

**-ರವಿ ಡಿ.ಚನ್ನಣ್ಣನವರ್**, ಎಸ್‌ಪಿ

ಇದೇ ರೀತಿ ಮೈಸೂರಿನ ಹರಿವಿದ್ಯಾಲಯ ಪಿಯು ಕಾಲೇಜು ತಂಡ, ಜೆ.ಪಿ.ನಗರ ಜೆಎಸ್‌ಎಸ್ ಪಿಯು ಕಾಲೇಜು, ಹೆಬ್ಬಾಳು ಕೆಎನ್‌ಸಿ ಇನ್ನೋವೆಟಿವ್ ಪಿಯು ಕಾಲೇಜು, ಬನ್ನಿಮಂಟಪ ಜೆಎಸ್‌ಎಸ್ ಪಿಯು ಕಾಲೇಜು, ಸುಕೃತ ಸ್ವತಂತ್ರ ಪಿಯು ಕಾಲೇಜು ತಂಡಗಳು ನೃತ್ಯ ಪ್ರದರ್ಶನ ನೀಡಿ ರಂಜಿಸಿದವು.

ಶಾಸಕ ಎಂ.ಕೆ.ಸೋಮಶೇಖರ್, ಮಹಾಪೌರ ಎಂ.ಜೆ.ರವಿಕುಮಾರ್, ಉಪ ಮಹಾಪೌರರಾದ ರತ್ನ ಲಕ್ಷ್ಮಣ್, ಮೈಲ್ಯಾಕ್ ಅಧ್ಯಕ್ಷ ಎಚ್.ಎ.ವೆಂಕಟೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷೆ ಮಲ್ಲಿಗೆ ವೀರೇಶ್, ಜಿಪಂ ಸದಸ್ಯ ರಾಕೇಶ್ ಪಾಪಣ್ಣ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರವಿ ಡಿ.ಚನ್ನಣ್ಣನವರ್, ಸಮಿತಿ ಕಾರ್ಯದರ್ಶಿ ಜಿ.ಎಸ್.ಸೋಮಶೇಖರ್, ಶಿವಕುಮಾರ್ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನಗರ ಪಾಲಿಕೆ ಆಯುಕ್ತ ಹಾಗೂ ಯುವ ದಸರಾ ಸಮಿತಿ ಕಾರ್ಯಾಧ್ಯಕ್ಷ ಜಿ.ಜಗದೀಶ್ ಸ್ವಾಗತಿಸಿದರು. ಕಾರ್ಯಕ್ರಮ ಆರಂಭಕ್ಕೂ ಮುನ್ನ ಅಮ್ಮ ರಾಮಚಂದ್ರ, ಲೋಕೇಶ್, ನಿಂಗರಾಜು ಮತ್ತು ತಂಡದವರು ವಿವಿಧ ಹಾಡುಗಳನ್ನು ಹಾಡಿ ರಂಜಿಸಿದರು. ಮಿಮಿಕ್ರಿ ಶ್ಯಾಮ್, ತೀರ್ಥ ನಿರೂಪಿಸಿದರು.

**ಜನಪ್ರತಿನಿಧಿಗಳ ಗೈರು:** ಈ ಸಾಲಿನ ದಸರಾ ಮಹೋತ್ಸವದ ಮೊದಲನೇ ಕಾರ್ಯಕ್ರಮ ಯುವ ಸಂಭ್ರಮಕ್ಕೆ ಆಹ್ವಾನಿತರ ಪಟ್ಟಿಯಲ್ಲಿದ್ದ ಬಹುತೇಕ ಜನಪ್ರತಿನಿಧಿಗಳ ಅನುಪಸ್ಥಿತಿ ಎದ್ದು ಕಾಣುತ್ತಿತ್ತು. ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರು ಗೈರಾಗಿದ್ದರು. ಶಾಸಕ ಎಂ.ಕೆ.ಸೋಮಶೇಖರ್ ತಡವಾಗಿ ಕಾರ್ಯಕ್ರಮಕ್ಕೆ ಬಂದರು.